ಕೈಗಿತ್ತರು. ಏನು ಮಾಡುತ್ತಿದ್ದಾರೆ ಗುರುಗಳು? ಅವರದ್ದೇ ತಂಬೂರಿಯನ್ನು ತನಗೇಕೆ ಕೊಡುತ್ತಿದ್ದಾರೆ ಎಂಬ ಪ್ರಶ್ನೆಗಳಿಗೆಲ್ಲ ಅಲ್ಲಿ ಅವಕಾಶವೇ ಇರಲಿಲ್ಲ. ಕಣ್ಣು ತುಂಬಿ ನೀರು ತುಳುಕುತ್ತಿತ್ತು. ಮಾತಿನ ಅವಶ್ಯಕತೆಯೇನೂ ಕಾಣಲಿಲ್ಲ.

ಹಾಗೆ ಜೋಡಿ ತಂಬೂರಗಳೊಂದಿಗೆ ಪಟ್ಟಣದ ತನ್ನ ಕೋಣೆ ಸೇರಿದ್ದ ಏಕನಾಥ. ಸ್ವಲ್ಪ ದಿನದಲ್ಲೇ 'ಗವಾಯಿಗಳು ಇನ್ನಿಲ್ಲ'ವೆಂಬ ಸುದ್ದಿ ಬಂದು ಅಪ್ಪಳಿಸಿತ್ತು. ಯಾಕೋ ತನ್ನ 'ಗುರುಗಳು ಹೊರಟುಹೋದ ಬರಿಯ ದೇಹ'ವನ್ನು ನೋಡುವ ಮನಸ್ಸಾಗದೇ ತಂಬೂರ ಹಿಡಿದು ಹಾಡಲು ತೊಡಗಿದವನು ಅದೆಷ್ಟೋ ಹೊತ್ತು ಆವೇಶ ಬಂದವನಂತೆ ಹಾಡುತ್ತಲೇ ಇದ್ದ. ಗವಾಯಿಗಳ ಗಾಯನದ ವೈಶಿಷ್ಟ್ಯವೆಲ್ಲಾ ತನ್ನೊಳಗೆ ಬಂದಂತೆ ಅನಿಸಿ ಅವರ ಮಿಂಚಿನ ವೇಗದ ತಾನ್‌ಗಳನ್ನು ಹಾಡುತ್ತಾ ಹಾಡುತ್ತಾ ಮೈಯ ಕಸುವೆಲ್ಲಾ ಇಳಿದಂತೆ ಆಯಾಸಗೊಂಡ. ಹಾಡುವುದನ್ನು ನಿಲ್ಲಿಸಿದವನು ಬಿಕ್ಕಿ ಬಿಕ್ಕಿ ಅಳತೊಡಗಿದ. ಸಂಗೀತದೊಳಗಿನ ತನ್ನ 20 ವರ್ಷಗಳ ಜೀವಿತ, ಶೂನ್ಯದಂತೆ ಕಾಣುವ ಭವಿಷ್ಯದೊಂದಿಗೆ ಸೇರಿ ತನ್ನನ್ನು ನೋಡಿ ಗಹಗಹಿಸಿ ನಕ್ಕಂತೆ ಕಂಡಿತು.

ಒಂದು ಜೊತೆ ಚಪ್ಪಲ್ ಕೊಳ್ಳಲು, ಒಂದು ಜುಬ್ಬಾ ಹೊಲಿಸಿಕೊಳ್ಳಲೂ ತಿಂಗಳ ಫೀಸ್ ಅನ್ನು ಕಾಯಬೇಕಾಗಿದ್ದ ಆಗಿನ ಸ್ಥಿತಿ ನೆನಪಿಗೆ ಬಂತು. ಒಂದು ದಿನ ಯಾಕೋ ತಾನು ಸಾಧಿಸಿಕೊಂಡ ರಾಗಗಳಿಂದಾಗದ ಚಮತ್ಕಾರ ಜನರಿಗೆ ಬೇಕಾದ ಅಭಂಗ–ಭಜನ್‌ಗಳಿಂದ ಆಗಬಲ್ಲದು ಎಂದೆನಿಸತೊಡಗಿತ್ತು. ಹಾಗೆ ಅಭಂಗ್‌ಗಳನ್ನು ಹಾಡುವಾಗ, ಮೊದಮೊದಲಿಗೆ ಗವಾಯಿಗಳ ಮುಖವೇ ಎದುರು ಬಂದಂತಾಗಿ, 'ಇದು ಆಗದ ಮಾತು' ಎನಿಸಿದರೂ ಒಂದೆರಡು ಕಡೆ ಕಾರ್ಯಕ್ರಮಗಳಲ್ಲಿ ರಾಗಗಾಯನವನ್ನು ಮೊಟಕುಗೊಳಿಸಿ ಅಭಂಗಗಳನ್ನು ಹಾಡಿದಾಗ ದೊರೆತ ಪ್ರತಿಕ್ರಿಯೆ ನಿರೀಕ್ಷೆಗೆ ಮೀರಿದ್ದಾಗಿತ್ತು. ನಂತರದ ದಿನಗಳಲ್ಲಿ ಅಭಂಗ ಗಾಯನಕ್ಕಾಗಿಯೇ ದೊಡ್ಡ ಬ್ಯಾನರ್‌ನ, ದೊಡ್ಡ ಸಂಭಾವನೆಯ ಕಾರ್ಯಕ್ರಮಗಳು ಎದುರಾಗಿದ್ದವು. ನಿಧಾನವಾಗಿ ತಾನೂ ಕಾರ್ಯಕ್ರಮಕ್ಕೆ ಹೊಂದುವಂತೆ ತುಳಸಿಮಣಿಯ ಸರ, ಗಂಧದ ತಿಲಕ, ಜರಿ ಪೋಷಾಕುಗಳನ್ನು ಧರಿಸತೊಡಗಿದ್ದ. ತಬಲಾ, ಹಾರ್ಮೋನಿಯಂ ಜೊತೆಯಲ್ಲಿ ಡೋಲಕ್, ತಾಳಗಳ ನಾದಗಳೊಂದಿಗೆ ಮೂಡಿಬರುವ ತನ್ನ ಹಾಡಿಗೆ ದೊರಕುವ ಚಪ್ಪಾಳೆಯ ಸುರಿಮಳೆ, ಭಾವಪರವಶರಾಗುವ ಜನರನ್ನು ನೋಡಿ ಸಂತೋಷಪಟ್ಟದ್ದು ಸುಳ್ಳಲ್ಲ.

